# ನನ್ನ ಕನಸಿಗೆ ಜೀವ ಬಂದಿದೆ

## ಮದನ್ ಕುಮಾರ್

ಉದಯದ 'ಶಾಂತಿನಿವಾಸ' ವಿಕಾಸ್

◆ **ಅಭಿನಯದ ಅನುಭವ ಏನನ್ನ ಕಲಿಸಿದೆ?**

ಕಲಾವಿದನಾಗಿ ತಾಳ್ಮೆಯನ್ನು ರೂಢಿಸಿಕೊಳ್ಳಬೇಕು. ಸಮಯಪ್ರಜ್ಞೆ ಇರಲೇಬೇಕು. 7 ಗಂಟೆಗೆ ಚಿತ್ರೀಕರಣ ಸ್ಥಳದಲ್ಲಿ ಇರಬೇಕು ಅಂದರೆ ಅಷ್ಟು ಹೊತ್ತಿಗೆ ಅಲ್ಲಿ ಇರಬೇಕು. ಬೇರೆಯವರು ಎಷ್ಟೊತ್ತಿಗಾದರೂ ಬರಲಿ. ಅದು ನನಗೆ ಬೇಡವಾದ ವಿಷಯ. ನಾನು ಮಾತ್ರ ಯಾರನ್ನೂ ಕಾಯಿಸಬಾರದು ಎನ್ನುವುದನ್ನು ಕಲಿತೆ. ಚಿಕ್ಕವನಿದ್ದಾಗಲೇ ನನಗೆ ವೇದಿಕೆಯಲ್ಲಿ ಕಾಣಿಸಿಕೊಳ್ಳಬೇಕು, ಒದಿನ ಜೊತೆ ನಟಿಸಬೇಕು ಎನ್ನುವ ಬಯಕೆ ಇತ್ತು. ನನ್ನ ಗೆಳೆಯನ ಸಹಾಯದಿಂದ ಈ ಕ್ಷೇತ್ರಕ್ಕೆ ಸೆಟ್‌ಬಾಯ್ ಆಗಿ ಕೆಲಸವನ್ನು ಆರಂಭಿಸಿದೆ. ಅದೇ ನಿತ್ಯದ ಕೆಲಸವಾಯಿತು. ಪರಿಚಯದ ಮೇಲೆ ಪ್ರೊಡಕ್ಷನ್ ಬಾಯ್ ಆದೆ. ಕಾಸ್ಟ್ಯೂಮ್ ಕಲಾವಿದರಿಗೆ ಸಹಾಯಕ, ಲೈಟ್ ಬಾಯ್ ಆಗಿ ಬೇರೆ ಬೇರೆ ಹಂತದಲ್ಲಿ 13 ಸಿನಿಮಾಗಳಲ್ಲಿ ಕೆಲಸ ಮಾಡಿದ್ದೇನೆ. ಬಿಡದ ಯತ್ನದಿಂದ ಕೊನೆಗೂ ನಟನಾದೆ.

◆ **ನಟನೆಯನ್ನು ಆರಂಭಿಸಿದ್ದು ಹೇಗೆ?**

ಹಾಸನ ಜಿಲ್ಲೆ ಗೊರೂರು ಬಳಿಯ ಚಿಕ್ಕಬಾಗನಹಳ್ಳಿ ನಮ್ಮೂರು. ಹಾಸನದಲ್ಲಿ ಅಪ್ಪ ಆಟೊ ಓಡಿಸುತ್ತಿದ್ದರು. ಅಮ್ಮ ಗಾರ್ಮೆಂಟ್‌ಗೆ ಹೋಗುತ್ತಿದ್ದರು. ನಾನು ಅಲ್ಲೇ ಬೆಳೆದೆ. ಬಿಕಾಂ ಓದಿದ್ದೇನೆ. ಖಾಸಗಿ ಜಾಹೀರಾತು ಕಂಪನಿಯಲ್ಲಿ ಕೆಲಸ ಮಾಡುತ್ತೇನೆ. ಬಾಲ್ಯದಲ್ಲಿ ಸಿನಿಮಾ ನಟ–ನಟಿಯರು ಹಾಸನಕ್ಕೆ ಬಂದಾಗ ಅವರ ಜೊತೆ ಫೋಟೊ ತೆಗೆಸಿಕೊಳ್ಳಲು ಅಭಿಮಾನಿಗಳು ನಡೆಸುತ್ತಿದ್ದ ಪೈಪೋಟಿ ನೋಡಿ ಬೆರಗಾಗುತ್ತಿದ್ದೆ. ನನಗೂ ಹಾಗೇ ಆಗಬೇಕು ಎನ್ನುವ ಆಸೆ ಚಿಗುರೊಡೆಯುತ್ತಿತ್ತು. ಆ ನನ್ನ ಆಸೆಗೆ ರೆಕ್ಕೆ ಕಟ್ಟಿ ಹಾರಬಯಸಿದ್ದರಿಂದ ಬೆಂಗಳೂರಿಗೆ ಬಂದೆ. ತಾಂತ್ರಿಕ ತಂಡದಲ್ಲಿ ಕೆಲಸ ಮಾಡುತ್ತಿದ್ದಾಗ ನಿರ್ದೇಶಕರಿಗೆ ಸಿನಿಮಾದಲ್ಲಿ ನಟನೆಗೆ ಅವಕಾಶ ಮಾಡಿಕೊಡಿ ಎಂದು ಕೇಳಿಕೊಂಡೆ. ಒಬ್ಬರು ಕೊಡುತ್ತೇನೆ ಎಂದು ತಮ್ಮ ವೈಯಕ್ತಿಕ ಕೆಲಸಗಳನ್ನೇ ಮಾಡಿಸಿಕೊಂಡರೇ ಹೊರತು ಅವಕಾಶವನ್ನು ಕೊಡಲಿಲ್ಲ. ಪ್ರೊಡಕ್ಷನ್ ಸಹಾಯಕನಾಗಿ ಕೆಲಸ ಮಾಡುತ್ತಲೇ ರಕ್ಷಿತ್ ಶೆಟ್ಟಿ ಅವರ 'ಅವನೇ ಶ್ರೀಮನ್ನಾರಾಯಣ'ದಲ್ಲಿ ಜೂನಿಯರ್ ಆರ್ಟಿಸ್ಟ್ ಆಗುವ ಅವಕಾಶ ಸಿಕ್ಕಿತು. ಅಲ್ಲಿಂದ ಹತ್ತು ಹನ್ನೆರಡು ಸಿನಿಮಾಗಳಲ್ಲಿ ಪುಟ್ಟ ಪಾತ್ರಗಳಿಗೆ ಖುಷಿಪಟ್ಟೆ.

ಕಸ್ತೂರಿ ಟೀವಿಯಲ್ಲಿ 'ಏಟು ಎದುರೇಟು' ಸೀರಿಯಲ್‌ನಲ್ಲಿ ಸ್ವಲ್ಪ ದೊಡ್ಡ ಪಾತ್ರವನ್ನು ಮಾಡಿದೆ. ಉದಯದ 'ನೇತ್ರಾವತಿ' ನನ್ನ ನಟನೆಯ ಬದುಕನ್ನು ಬದಲಿಸಿತು. ಅದರಲ್ಲಿ ಕಾಡಿನ ರಾಜನ ಪಾತ್ರ ಅದೂ ನೆಗೆಟಿವ್ ಆಗಿತ್ತು. ಅದರ ನಂತರ ನೆಗೆಟಿವ್ ಪಾತ್ರಗಳು ಸಿಗಲು ಶುರುವಾದವು. 'ಮೈನಾ'ದಲ್ಲಿ ಭೈರನ ಪಾತ್ರ ಮಾಡಿದೆ. ಅದು ನನ್ನ ಬದುಕಿಗೆ ಮಹತ್ವದ ತಿರುವನ್ನು ನೀಡಿತು. ಆ ಪಾತ್ರ ಮುಗಿಯುತ್ತಿದ್ದಂತೆ ವಿಕಾಸ್ ಪಾತ್ರ ಸಿಕ್ಕಿದೆ. ಇದು ರಿಪ್ಲೇಸ್ ಪಾತ್ರ.



◆ **ಬಣ್ಣ ಹಚ್ಚುತ್ತಿದ್ದ ನೀವು ಸ್ವತಃ ಬಣ್ಣ ಹಚ್ಚಿಸಿಕೊಳ್ಳುವ ಸಂದರ್ಭ ಹೇಗಿತ್ತು?**

ಕಲಾವಿದ ಆದವನು ಬಣ್ಣ ಹಚ್ಚುವುದನ್ನೇ ಕಾಯುತ್ತಿರುತ್ತಾನೆ. ನನಗೆ ನಟನೆಯ ಹಿನ್ನೆಲೆಯಿಲ್ಲ. ಬಡತನದಿಂದ ಬೆಳೆದು ಬಂದವನು ಸ್ಥಳೀಯ ಪತ್ರಿಕೆಯಲ್ಲಿ ಕೆಲಸ ಮಾಡಿಕೊಂಡು ಇದ್ದೆ. ಬಣ್ಣ ಹಚ್ಚಿದ ಮೇಲೆ ನನ್ನ ಕನಸಿಗೆ ಜೀವ ಬಂತು. ಚಿಕ್ಕ ವಯಸ್ಸಿನಲ್ಲೇ ಇದ್ದ ದೊಡ್ಡ ಕನಸು ಆ್ಯಕ್ಟ್ ಮಾಡಬೇಕು ಎನ್ನುವುದಾಗಿತ್ತು. ಇದು ಸಂಪಾದನೆಗಿಂತ ಜನಪ್ರಿಯತೆ ಗಳಿಸಬೇಕು. ಜನರಿಗೆ ನಾನು ಗೊತ್ತಾಗಬೇಕು ಎಂದು ಯೋಚಿಸುತ್ತಿದ್ದೆ. ಉದ್ಯಮಿ, ರಾಜಕೀಯ ಬಿಟ್ಟರೆ ಕಲಾವಿದನಾದರೆ ಮಾತ್ರ ಜನಪ್ರಿಯತೆ ಗಳಿಸಬಹುದು ಎಂಬ ಲೆಕ್ಕಾಚಾರ ನನ್ನದಾಗಿತ್ತು. ಹಾಗಾಗಿ ಮೊದಲ ಎರಡು ಕ್ಷೇತ್ರ ನನ್ನಿಂದ ಸಾಧ್ಯ ಇಲ್ಲ. ನನಗೆ ಸಾಧ್ಯ ಆಗಿದ್ದು, ದಕ್ಕಿದ್ದು ಕಲಾ ಕ್ಷೇತ್ರ.

◆ **ಈಗ ಹೀರೊ ಆಗುವ ಅವಕಾಶ ಸಿಕ್ಕರೆ?**

ನನಗೆ ಪಾತ್ರಗಳಷ್ಟೇ ಮುಖ್ಯ. ಇದುವರೆಗೂ ಖಳನಾಯಕನಾಗಿಯೇ ಕೆಲಸ ಮಾಡುತ್ತಿದ್ದೇನೆ. ಒಂದರಿಂದ ಒಂದು ಅವಕಾಶಗಳನ್ನು ಕೊಟ್ಟಿದ್ದಾರೆ. ನನ್ನನ್ನು ನಂಬಿ ಯಾರಾದರೂ ನಾಯಕನ ಪಾತ್ರ ಕೊಟ್ಟರೆ ಖುಷಿಯಿಂದ ಮಾಡುತ್ತೇನೆ. ಹೀರೊ – ವಿಲನ್ ಆಗಬೇಕು ಅನ್ನುವುದಕ್ಕಿಂತ ಜನರನ್ನು ರಂಜಿಸುವ ಒಳ್ಳೆಯ ಪಾತ್ರಗಳಿಗಾಗಿ ಕಾಯುತ್ತಿದ್ದೇನೆ. ಹೀರೊ ಆಗಲಿ ಖಳನಾಯಕನೇ ಆಗಲಿ ಜನ ಇಷ್ಟಪಟ್ಟು ಬೆಂಬಲಿಸಿದರೆ ಅದನ್ನು ಮಾಡುತ್ತೇನೆ. ಯಾವುದೇ ಒಂದು ಪಾತ್ರಕ್ಕೇ ಸೀಮಿತ ಆಗದೇ ಎಲ್ಲ ರೀತಿಯ ಪಾತ್ರಗಳನ್ನು ನಿರ್ವಹಿಸುತ್ತೇನೆ.

◆ **ವಿಕಾಸ್ ಪಾತ್ರ ಹೇಗಿದೆ?**

ಜೀವನದ ಗುರಿ ಮುಟ್ಟಲು ಮತ್ತೊಂದು ಮೆಟ್ಟಿಲು ಹತ್ತಿದ್ದೇನೆ. ಈ ಪಾತ್ರದ ಮೂಲಕ ಮತ್ತೊಂದು ಸಿನಿಮಾಕ್ಕೆ ಅವಕಾಶ ಸಿಕ್ಕಿದೆ. ಇದರಿಂದ ನನಗೆ ಐಡೆಂಟಿಟಿ ಸಿಕ್ಕಿದೆ. ಸಾರ್ವಜನಿಕ ವಾಹನದಲ್ಲಿ ಓಡಾಡುವಾಗ ವಿಕಾಸ್ ಪಾತ್ರ ಮಾಡುತ್ತಿದ್ದೀರಿ ಎಂದು ಜನ ಸೆಲ್ಫಿ ತೆಗೆದುಕೊಳ್ಳುತ್ತಾರೆ. ಸೊನ್ನೆಯಿಂದ ಆರಂಭಿಸಿದ್ದೇನೆ. ಬೆಳೆಯುತ್ತೇನೆ ಎನ್ನುವ ಭರವಸೆಯಿದೆ.

■ **ರಾಘವೇಂದ್ರ ಕೆ.**